# ಅಸತೋಮಾ...

■ ಕೌಂಡಿನ್ಯ
ಕಲೆ: ಎಚ್.ಎಸ್. ಮೋನಪ್ಪ



## ಅವಳಿಗಳಂತಿರುವ ಮಲ್ಲಿಗೆ-ಕಾವ್ಯ

ಪರಮಾಶ್ಚರ್ಯದಿಂದ 'ನೀವು... ನೀವು... ನನ್ನ ತಾಯಿಯ ಮಗಳೇ...'

ಹೆಜ್ಜೆಗಳ ಶಬ್ದ ಕೇಳಿಸಿತು. ಎಲ್ಲರೂ ಅತ್ತ ತಿರುಗಿದರು.

ರುದ್ರನಾಗ ನಿಂತಿದ್ದ. ಮಲ್ಲಿಗೆ ಅವನ ಹತ್ತಿರ ಬಂದು ಮೆಲುಧ್ವನಿಯಲ್ಲಿ 'ಇವಳು ನಿಮ್ಮ ತಂಗಿಯ ಮಗಳು...'

ರುದ್ರನಾಗನ ಮುಖದ ಚಹರೆಯೇ ಬದಲಾಯಿತು. ಪೈಶಾಚಿಕ ಆನಂದ ಕಂಡು ಬರುತ್ತಿದೆ. ತಂಗಿಗೆ ಮತ್ತೊಬ್ಬಳು ಮಗಳಿದ್ದಾಳೆ ಅಂತ ಗೊತ್ತಿರಲಿಲ್ಲ. ಬಲಿಪಶು ತಾನಾಗಿಯೇ ಬಲಿಪೀಠಕ್ಕೆ ಬಂದಿದೆ ಎಂಬ ಮಹಾದಾನಂದದಿಂದ ರುದ್ರನಾಗ ಗಹಗಹಿಸಿ ನಗುತ್ತಿದ್ದಾನೆ! ಸೋಲಿಗಪುರದ ಮಾಂತ್ರಿಕನ ಮನೆಯ ಮುಂಭಾಗದಲ್ಲಿ ಎಲ್ಲರೂ ನಿಂತಿದ್ದಾರೆ.

ರುದ್ರನಾಗ... ಮಲ್ಲಿಗೆ

ಕಾವ್ಯ... ಸುರೇಂದ್ರ

ರುದ್ರನಾಗ ನಗುತ್ತಿದ್ದಾನೆ. ಅವನ ಬಾಯಲ್ಲಿ ಹಲ್ಲುಗಳಿಲ್ಲ... ಕೆಂಪಡರಿರುವ ಗೆಡ್ಡೆ ಕಣ್ಣುಗಳು... ಸ್ಥೂಲ ದೇಹ. ಸುರೇಂದ್ರನಿಗೆ ಮುಜುಗರವಾಗುತ್ತಿದೆ. ಇಂಥ ಹುಚ್ಚನ ಹತ್ತಿರ ತನ್ನನ್ನು ಯಾಕೆ ಕರೆದುಕೊಂಡು